<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>

<u>ದಕ್ಷಿಣ ಕನ್ನಡ, ಮಂಗಳೂರು.</u>

## <u>ಸ್ಪೆಷಲ್ ಕೇಸ್ ನಂಬ್ರ 24/2015</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ಎ.ಶಕುಂತಲಾ ಕಾಮತ್ | <u>ಡಿ.ಡಬ್ಲ್ಯೂಃ 8</u> |
| ಗಂಡನ ಹೆಸರು | : | ರಘುಪಾಲ್ ಜಿ. | |
| ಪ್ರಾಯ | : | 58 ವರ್ಷ | **<u>ದಿನಾಂಕಃ 25.03.2022</u>** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಎಲ್.ಐ.ಸಿ. ಏಜೆಂಟ್ | |
| ವಾಸಸ್ಥಳ | : | ಕದ್ರಿ, ಮಲ್ಲಿಕಟ್ಟೆ ಮಂಗಳೂರು. | |

<u>ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ</u>

ಆರೋಪಿ ನನ್ನ ಗಂಡ. ಬಿ.ಎ. ಪದವಿ ಓದಿದ್ದೇನೆ. ನನ್ನ ತಂದೆಯ ಮನೆ ಬಂಟ್ವಾಳ ತಾಲೂಕಿನ ಮುಡಿಪು ಕುರ್ನಾಡು ಎಂಬಲ್ಲಿ ಇದೆ. ನನ್ನ ತಂದೆಗೆ ಜಮೀನು ಇತ್ತು ಮತ್ತು ಕೃಷಿ ಮಾಡುತ್ತಿದ್ದನು. ಆತ ಹೋಟೇಲ್ ನಡೆಸುತ್ತಿದ್ದನು. ನನ್ನ ತಂದೆ ಹಳ್ಳಿಯಿಂದ ಅಡಿಕೆ ಖರೀದಿಸಿ ಮಾರಾಟ ಮಾಡುತ್ತಿದ್ದನು. ದಿನಾಂಕ 14.12.1989 ರಂದು ನನ್ನ ಮದುವೆ ಆಗಿದೆ.

2. ನಾನು ಮದುವೆ ಆಗುವ ಪೂರ್ವದಲ್ಲಿ ಟ್ಯೂಷನ್ ಹೇಳುತ್ತಿದ್ದೆನು. 1987 ರಿಂದ ನಾನು ಎಲ್.ಐ.ಸಿ. ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಆ ವರ್ಷದಿಂದ ಆದಾಯ ತೆರಿಗೆ ರಿಟರ್ನ್ ಕಟ್ಟುತ್ತಿದ್ದೇನೆ. ನನ್ನ ಮದುವೆಯ ಎಲ್ಲಾ ಖರ್ಚನ್ನು ನನ್ನ ತಂದೆ ತಾಯಿ ವಹಿಸಿದ್ದಾರೆ. ಮದುವೆ ಕಾಲದಲ್ಲಿ ನನ್ನ ತವರುಮನೆಯವರು ನನಗೆ 40 ಪವನ್ ಬಂಗಾರದ ಆಭರಣಗಳನ್ನು, 450 ಗ್ರಾಂ ಬೆಳ್ಳಿ

ಸಾಮಾನುಗಳನ್ನು, ರೂ.25,000/- ನಗದನ್ನು ಉಡುಗೊರೆಯಾಗಿ ನೀಡಿರುತ್ತಾರೆ. ನಾನು ಮದುವೆಯಾದ ನಂತರ ಆರೋಪಿಯೊಂದಿಗೆ ಮಂಗಳೂರಿನ ಲೇಡಿಹಿಲ್ ನಲ್ಲಿರುವ ರಾಮಕೃಷ್ಣ ಅಪಾರ್ಟ್ ಮೆಂಟ್ ದಲ್ಲಿರುವ ಮನೆಯಲ್ಲಿ ವಾಸ ಇದ್ದೆವು. ಆ ಮನೆಯನ್ನು 1995 - 1996 ರಲ್ಲಿ ಖರೀದಿ ಮಾಡಿದ್ದೇವೆ. 1990 ರಲ್ಲಿ ನನ್ನ ಸೀಮಂತ ಕಾರ್ಯಕ್ರಮ ನನ್ನ ತವರುಮನೆಯಲ್ಲಿ ಆಗಿದೆ. ಆ ಸಮಯದಲ್ಲಿ ಸುಮಾರು 100 ರಿಂದ 150 ಗ್ರಾಂ ಚಿನ್ನದ ಆಭರಣಗಳನ್ನು ನನ್ನ ತವರುಮನೆಯವರು ನೀಡಿದ್ದಾರೆ.

3. 2003 ರಲ್ಲಿ ಮಲ್ಲಿಕಟ್ಟೆಯಲ್ಲಿರುವ ಮನೆಗೆ ಬಂದು ವಾಸ ಮಾಡಲು ಪ್ರಾರಂಭಿಸಿದ್ದೇವೆ. ಆ ಮನೆ ಕಟ್ಟಿದ ಜಾಗೆಯನ್ನು 1999 ರಲ್ಲಿ ಖರೀದಿಸಿದ್ದೇವೆ. ಆ ಜಾಗೆಯಲ್ಲಿ 2 ಅಂಗಡಿಗಳನ್ನು ಕಟ್ಟಿಸಿದ್ದೆವು. ಸ್ವಲ್ಪ ಜಾಗೆಯನ್ನು ಕಾರ್ ಪಾರ್ಕಿಂಗ್ ಗಾಗಿ ಬಿಟ್ಟಿದ್ದೆವು. 2 ಅಂಗಡಿಗಳನ್ನು ಬಾಡಿಗೆಯಿಂದ ನೀಡಿದ್ದೆವು. ಆ ಎರಡೂ ಅಂಗಡಿಗಳನ್ನು ಮೋಹನ್ ದಾಸ್ ಸಾಲಿಯಾನ್ ಈತನಿಗೆ ಬಾಡಿಗೆಯಿಂದ ಮೇ 2003 ರಲ್ಲಿ ಕೊಟ್ಟಿದ್ದೆವು. ಆತ ಮೇ 2012 ರ ವರೆಗೆ ಆ ಅಂಗಡಿಗಳಲ್ಲಿ ಬಾಡಿಗೆದಾರನಾಗಿದ್ದನು. ಆತ ಪ್ರತೀ ತಿಂಗಳು ನಮಗೆ ರೂ.4,500/- ಬಾಡಿಗೆ ಮೊದಲಿಗೆ ಕೊಡುತ್ತಿದ್ದನು. ಆ ಬಾಡಿಗೆ ಪ್ರತೀ ವರ್ಷ ಶೇಕಡಾ 10 ರಷ್ಟು ಏರಿಕೆ ಆಗುತ್ತಿತ್ತು. ಏರಿಕೆಯಾದ ಬಾಡಿಗೆಯನ್ನು ಆತ ನೀಡಿದ್ದಾನೆ.

4. ನನ್ನ ಮಗನ ನಾಮಕರಣ ನನ್ನ ತವರುಮನೆಯಲ್ಲಿ ಆಗಿದೆ. ಆಗ ನನ್ನ ತವರುಮನೆಯವರು ನನ್ನ ಮಗನಿಗೆ 7 - 8 ಪವನ್ ಚಿನ್ನದ ಆಭರಣಗಳನ್ನು, ರೂ.10,000/- ನಗದು ಹಣವನ್ನು ನೀಡಿದ್ದಾರೆ. ನನ್ನ ಸಂಬಂಧಿಕರು ಸುಮಾರು ರೂ.1,00,000/- ವರೆಗೆ ನಗದು ಹಣವನ್ನು ಉಡುಗೊರೆಯಾಗಿ ನೀಡಿದ್ದಾರೆ.

5. ನನ್ನ ತಾಯಿ ಮತ್ತು ನನ್ನ ಅಕ್ಕ ಈಗ ನನ್ನ ತಾಯಿಯ ಮನೆಯಲ್ಲಿ ವಾಸ ಇದ್ದಾರೆ. ನನ್ನ ತಾಯಿಗೆ 90 ವರ್ಷ ವಯಸ್ಸಾಗಿದೆ. ನನ್ನ ಮಗನ ವೈದ್ಯಕೀಯ ವಿದ್ಯಾಭ್ಯಾಸಕ್ಕಾಗಿ ಸುಮಾರು ರೂ.10,00,000/- ಹಣವನ್ನು ನನ್ನ ತವರುಮನೆಯವರು ನೀಡಿರುತ್ತಾರೆ. ನನ್ನ ತಾಯಿಗೆ ಪ್ರತೀ ವರ್ಷ ರೂ.10,00,000/- ಕೃಷಿ ಆದಾಯ ಬರುತ್ತದೆ. ನನ್ನ ತಾಯಿಗೆ 7 ಎಕರೆ 60 ಸೆಂಟ್ಸ್ ಜಾಗೆ ಕುರ್ನಾಡು ಎಂಬಲ್ಲಿ ಇದೆ.

6. ಮುಡಿಪು ಎಂಬಲ್ಲಿ ನನ್ನ ಹೆಸರಿನಲ್ಲಿ 10 ಸೆಂಟ್ಸ್ ಜಾಗೆ ಇತ್ತು. ಆ ಜಾಗೆಯನ್ನು ನಾನು ನನ್ನ ತಂಗಿಗೆ ರೂ.80,000/- ಗಳಿಗೆ ಮಾರಾಟ ಮಾಡಿದ್ದೇನೆ. ಅದರಲ್ಲಿ ಖರ್ಚನ್ನು ತೆಗೆದು ರೂ.62,900/- ಹಣ ದೊರೆತಿದೆ.

7. ನನಗೆ ಎಲ್.ಐ.ಸಿ. ಯಿಂದ 1987 ರಿಂದ 2012 ರ ಅವಧಿಯಲ್ಲಿ ಒಟ್ಟು ಸುಮಾರು ರೂ.10,00,000/- ರಿಂದ ರೂ.11,00,000/- ಆದಾಯ ಬಂದಿರುತ್ತದೆ. ನಿಶಾನೆ ಡಿ-3 ರಿಂದ ನಿಶಾನೆ ಡಿ-7 ರಲ್ಲಿರುವ ರಿಟರ್ನ್ ಗಳನ್ನು ನಾನೇ ಕಟ್ಟಿರುತ್ತೇನೆ.

8. ನನ್ನ ತವರುಮನೆಯವರು ನೀಡಿದ ಆಭರಣಗಳ ಮತ್ತು ನಗದು ಹಣದ ವಿವರವನ್ನು ನನ್ನ ಗಂಡನಿಗೆ ತಿಳಿಸಿದ್ದೇನೆ. 2003 ರಲ್ಲಿ ಮಲ್ಲಿಕಟ್ಟೆಯಲ್ಲಿರುವ ಮನೆಯ ಗೃಹಪ್ರವೇಶ ಆಗಿರುತ್ತದೆ. ಆ ಸಮಾರಂಭದಲ್ಲಿ ಸುಮಾರು 150 ಗ್ರಾಂ ಚಿನ್ನದ ಒಡವೆಗಳು, ರೂ.1,00,000/- ನಗದು ಹಣ, ಮನೆಯಲ್ಲಿ ಉಪಯೋಗಿಸುವ ಅನೇಕ ಸಾಮಾನುಗಳು ಉಡುಗೊರೆಯಾಗಿ ಬಂದಿರುತ್ತವೆ.

Spl.C.No.24/2015 DW-8
Date: 25.03.2022

9. ನನ್ನ ಮಗನ ವೈದ್ಯಕೀಯ ವಿದ್ಯಾಭ್ಯಾಸಕ್ಕಾಗಿ ನನ್ನ ಗೆಳತಿಯಾದ ವೇದಾವತಿ ಇವಳ ಗಂಡನಾದ ಲೋಕಯ್ಯ ಗೌಡ ಈತನಿಂದ ರೂ.3,20,000/- ಹಣವನ್ನು 7 ಕಂತುಗಳಲ್ಲಿ ಸಾಲವಾಗಿ ಪಡೆದಿದ್ದೇನೆ. ಅದನ್ನು 2017 ರಲ್ಲಿ ಮರುಪಾವತಿ ಮಾಡಿದ್ದೇವೆ. ನನ್ನ ಗಂಡನ ತಂಗಿ ಸೀಮಾ ಕುಮಾರಿ ಇವಳು ನನ್ನ ಮಗನ ವಿದ್ಯಾಭ್ಯಾಸಕಾಗಿ ರೂ.6,30,000/- ಹಣವನ್ನು ನೀಡಿದ್ದಾರೆ. ಅದರಲ್ಲಿ ರೂ.4,00,000/- ಚೆಕ್ ರೂಪದಲ್ಲಿ ಮತ್ತು ಉಳಿದ ಹಣವನ್ನು ನಗದಾಗಿ ನೀಡಿದ್ದಾಳೆ. ನನ್ನ ಅಕ್ಕ ನಿರ್ಮಲಾ ಕುಮಾರಿ ಇವಳು ನನ್ನ ಮಗನ ವಿದ್ಯಾಭ್ಯಾಸಕಾಗಿ ರೂ.2,75,000/- ಹಣವನ್ನು ನೀಡಿದ್ದಾರೆ. ನನ್ನ ಭಾವ ಚಂದ್ರಶೇಖರ್ ಶೆಣೈ ಇವರು ರೂ.1,50,000/- ಹಣವನ್ನು ನನ್ನ ಮಗನ ವಿದ್ಯಾಭ್ಯಾಸಕ್ಕಾಗಿ ನೀಡಿದ್ದಾರೆ. ನನ್ನಗಂಡನ ತಮ್ಮನಾದ ಗುರುರಾಜ್ ಇವರು ರೂ.1,80,000/- ಹಣವನ್ನು ನನ್ನ ಮಗನ ವಿದ್ಯಾಭ್ಯಾಸಕ್ಕಾಗಿ ನೀಡಿದ್ದಾರೆ. ಲೋಕಯ್ಯ ಗೌಡ ಈತನನ್ನು ಹೊರತುಪಡಿಸಿ ಮೇಲೆ ಹೇಳಿದ ಎಲ್ಲರೂ ಹಣವನ್ನು ಉಡುಗೊರೆಯಾಗಿ ನೀಡಿದ್ದಾರೆ.

(ಸಾಕ್ಷಿಯ ಮುಂದಿನ ವಿಚಾರಣೆಗಾಗಿ ಆರೋಪಿ ಪರ ವಕೀಲರು ಸಮಯ ಕೇಳಿದ್ದಾರೆ. ಕಾರಣ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದ.ಕ., ಮಂಗಳೂರು.